167

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1398 |
| ಉತ್ತರಿಸಬೇಕಾದ ದಿನಾಂಕ | : 18.12.2025 |
| ಸದಸ್ಯರ ಹೆಸರು | : ಶ್ರೀ ಮಂಜುನಾಥ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : ಮಾನ್ಯ ಮುಖ್ಯಮಂತ್ರಿಯವರು |

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಕ್ರೀಡಾ ಇಲಾಖೆಯಿಂದ ಅನುದಾನವನ್ನು ನೀಡುವ ಕುರಿತು ಅಗತ್ಯ ನಿಯಮಗಳನ್ನು ರಚಿಸಲಾಗಿದೆಯೇ? ಅವು ಯಾವುವು; ಯಾವ ಯಾವ ಕ್ರೀಡೆಗಳಿಗೆ ವಾರ್ಷಿಕವಾಗಿ ಅನುದಾನ ನೀಡಲಾಗುತ್ತಿದೆ: | ರಾಜ್ಯದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಕ್ರೀಡಾ ಇಲಾಖೆಯಿಂದ ಅನುದಾನವನ್ನು ನೀಡುವ ಕುರಿತು ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ನಿಯಮಗಳನ್ನು ರಚಿಸಲಾಗಿದೆ.<br><br>ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ವಿವಿಧ ಕ್ರೀಡೆಗಳಿಗೆ ಸಂಬಂಧಿಸಿದಂತೆ ರಾಜ್ಯ ಕ್ರೀಡಾ ಸಂಸ್ಥೆಗಳನ್ನು ಗುರುತಿಸಲಾಗಿದ್ದು, ರಾಜ್ಯ ಕ್ರೀಡಾ ಸಂಸ್ಥೆಗಳು ಆಯೋಜಿಸುವ ಕ್ರೀಡಾ ಚಟುವಟಿಕೆಗಳಿಗೆ ಅನುದಾನವನ್ನು ನೀಡಲು ಅನುದಾನ ಸಂಹಿತೆ ರಚಿಸಲಾಗಿದೆ.<br><br>ಯಾವುದೇ ಕ್ರೀಡೆಗೆ ವಾರ್ಷಿಕವಾಗಿ ಅನುದಾನ ನೀಡುವ ಕ್ರಮ ಇರುವುದಿಲ್ಲ. ಆಯಾ ಕ್ರೀಡೆಗಳ ರಾಜ್ಯ ಕ್ರೀಡಾ ಸಂಸ್ಥೆಗಳು ಕರ್ನಾಟಕ ತಂಡವನ್ನು ವಲಯ ಮತ್ತು ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಿಗೆ ನಿಯೋಜಿಸಲು, ತರಬೇತಿ ಶಿಬಿರಗಳನ್ನು ಆಯೋಜಿಸಲು, ರಾಜ್ಯ ಮತ್ತು ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳನ್ನು ಆಯೋಜಿಸಲು ಅನುದಾನ ಸಂಹಿತೆ ನಿಯಮಗಳನುಸಾರ ಸಲ್ಲಿಸುವ ಪ್ರಸ್ತಾವನೆಗಳನ್ನು ಆಧರಿಸಿ, ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ. ಪ್ರಸ್ತುತ, ಅಥ್ಲೆಟಿಕ್ಸ್, ಆರ್ಚರಿ, ಬಾಸ್ಕೆಟ್‌ಬಾಲ್, ಬ್ಯಾಡ್ಮಿಂಟನ್, ಫೆನ್ಸಿಂಗ್, ಜೂಡೋ, ಹಾಕಿ, ಕಯಾಕಿಂಗ್ & ಕನೂಯಿಂಗ್, ಸೆಪಕ್ ಟಕ್ರಾ, ವೇಯ್ಟ್‌ಲಿಫ್ಟಿಂಗ್, ವುಶು, ಬಾಕ್ಸಿಂಗ್, ಶೂಟಿಂಗ್, ನೆಟ್‌ಬಾಲ್, ಹ್ಯಾಂಡ್‌ಬಾಲ್, ಲಾನ್ ಟೆನ್ನಿಸ್, ಈಜು, ಟೇಬಲ್ ಟೆನ್ನಿಸ್, ಸೈಕ್ಲಿಂಗ್, ವಿಶೇಷ-ಚೇತನರ ಕ್ರೀಡೆಗಳು ಮತ್ತಿತರ ಕ್ರೀಡೆಗಳಿಗೆ ಅನುದಾನ ನೀಡಲಾಗುತ್ತಿದೆ.<br><br>ವಿಶೇಷ ಪ್ರಕರಣಗಳಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ರೀಡಾಕೂಟಗಳನ್ನು ಆಯೋಜಿಸಲು ಸರ್ಕಾರವು ಒಂದು ಬಾರಿಯ ಅನುದಾನವನ್ನು ಮಂಜೂರು ಮಾಡುತ್ತಿದೆ. |
| ಆ) | ರಾಜ್ಯದಲ್ಲಿ ಕಂಬಳ ಸಮಿತಿ ರಚಿಸುವ ಬಗ್ಗೆ ಇಲ್ಲಿಯವರೆಗೆ ಅಧಿವೇಶನದಲ್ಲಿ ಚರ್ಚಿಸಿದ್ದು ಈವರೆಗೆ ಆದ ಪ್ರಗತಿಯ ವಿವರಗಳೇನು; ಅನುದಾನ ಸಂಹಿತೆಯನ್ನು ರಚಿಸಲಾಗಿದೆಯೇ; | ರಾಜ್ಯದಲ್ಲಿ ಕಂಬಳ ಸಮಿತಿ ರಚಿಸುವ ಬಗ್ಗೆ ಇದುವರೆಗೂ ಕೈಗೊಂಡ ಕ್ರಮಗಳು.<br>1. ಕರ್ನಾಟಕ ರಾಜ್ಯ ಕಂಬಳ ಅಸೋಸಿಯೇಷನ್ (ರಿ), ಸಂಖ್ಯೆ 10, 1-39ಎ, ಜೈ ಭಾರತ್ ಮಿಲ್ ಬಿಲ್ಡಿಂಗ್, ಚಿತ್ತರಂಜನ್ ವೃತ್ತ, ಉಡುಪಿ ಜಿಲ್ಲೆ 576101 ಈ ಸಂಸ್ಥೆಗೆ ಕಂಬಳ ಕ್ರೀಡೆಯ **'ರಾಜ್ಯ ಕ್ರೀಡಾ ಸಂಸ್ಥೆ'**ಯಾಗಿ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಮಾನ್ಯತೆ ನೀಡಲಾಗಿದೆ.<br>2. ಕಂಬಳ ಕ್ರೀಡೆಗಳ ಆಯೋಜನೆಗೆ ಅನುದಾನ ಒದಗಿಸಲು ವಿಶೇಷ ಅನುದಾನ ಸಂಹಿತೆ ನಿಯಮಗಳನ್ನು ರೂಪಿಸಲು ಕ್ರಮವಹಿಸಲಾಗುತ್ತಿದೆ. |
| ಇ) | ಕರ್ನಾಟಕ ಕರಾವಳಿ ಭಾಗದಲ್ಲಿ ಸುಮಾರು 100 ಕ್ಕಿಂತ ಹೆಚ್ಚು ಸಾಂಪ್ರದಾಯಿಕ ಕಂಬಳಗಳು ನಡೆಯುತ್ತಿದ್ದರೂ ಕೆಲವೇ ಕಂಬಳಗಳಿಗೆ ಅತೀ | 2025-26ನೇ ಸಾಲಿನಲ್ಲಿ ಕಂಬಳ ಕ್ರೀಡೆಗೆ ಸಂಬಂಧಿಸಿದಂತೆ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿನ ಒಟ್ಟು 20 ಕಂಬಳ ಕ್ರೀಡಾ ಆಯೋಜಕ ಸಂಸ್ಥೆಗಳಿಗೆ ತಲಾ ರೂ.2.00 ಲಕ್ಷಗಳಂತೆ |

| | | |
|---|---|---|
| | ಕಡಿಮೆ ಅನುದಾನ ನಿಗಧಿಪಡಿಸಿದ್ದು, ರಾಜ್ಯ ಕಂಬಳ ಅಸೋಸಿಯೇಷನ್‌ನ ಮಾನ್ಯತೆಯಿರುವ ಕಂಬಳಗಳಿಗೆ ಒಂದು ಗಮನಾರ್ಹ ಮೊತ್ತದ ಅನುದಾನ ನೀಡಲು ಯಾವಾಗ ಕ್ರಮವಹಿಸಲಾಗುವುದು: | ಒಟ್ಟು ರೂ.40.00 ಲಕ್ಷಗಳ ಅನುದಾನವನ್ನು ಹಂಚಿಕೆ ಮಾಡಲಾಗಿದೆ.<br><br>ದಕ್ಷಿಣ ಕನ್ನಡ ಜಿಲ್ಲೆಯ 16 ಹಾಗೂ ಉಡುಪಿ ಜಿಲ್ಲೆಯ 04 ಕಂಬಳ ಆಯೋಜಕ ಸಂಸ್ಥೆಗಳನ್ನು ಗುರುತಿಸಿ, ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಸದರಿ ಕಂಬಳ ಆಯೋಜಕ ಸಂಸ್ಥೆಗಳಿಗೆ ಅನುದಾನವನ್ನು ಮಂಜೂರು ಮಾಡಿ, ದಿನಾಂಕ: 05-12-2025 ರಂದು ತಲಾ ರೂ.2.00 ಲಕ್ಷ ಮಂಜೂರು ಮಾಡಿ, ಆದೇಶ ಹೊರಡಿಸಿದೆ. ನಿಯಮಾನುಸಾರ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು. |
| ಈ | ಆಧುನಿಕ ಕಂಬಳಗಳಿಗೆ ಅನುದಾನ ನೀಡಿ ಈ ಕಂಬಳಗಳನ್ನು ಇನ್ನಷ್ಟು ಶಿಸ್ತುಬದ್ಧವಾಗಿ ನಡೆಸಲು ಅಗತ್ಯವಿರುವ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸುವ ಮೂಲಕ ಆಯಾಯ ಪ್ರದೇಶಗಳ ಅಭಿವೃದ್ಧಿಗೆ ಸಹಕರಿಸುವ ರೀತಿಯಲ್ಲಿ ಇಲಾಖೆ ಯಾವ ರೀತಿ ಕ್ರಮವಹಿಸುತ್ತಿದೆ: | ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆಯ 'ವೀರ ರಾಣಿ ಅಬ್ಬಕ್ಕ ಸಂಸ್ಕೃತಿ ಗ್ರಾಮ'ದಲ್ಲಿ 10 ಎಕರೆ ಜಾಗದಲ್ಲಿ 'ಕೋಟಿ-ಚೆನ್ನಯ್ಯ' ಹೆಸರಿನ ಜೋಡುಕೆರೆಯನ್ನು ನಿರ್ಮಾಣ ಮಾಡಲಾಗಿದ್ದು, ವೀಕ್ಷಕರ ಗ್ಯಾಲರಿ ಮತ್ತಿತರ ಅಗತ್ಯ ಮೂಲಸೌಕರ್ಯಗಳೊಂದಿಗೆ ಕಂಬಳ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ.<br>ಅದೇ ರೀತಿ, ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಮಿಯ್ಯಾರಿನಲ್ಲಿ 5 ಎಕರೆ ನಿವೇಶನದಲ್ಲಿ 'ಲವ-ಕುಶ' ಹೆಸರಿನ ಕಂಬಳ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ.<br>ಈ ಕಂಬಳ ಕ್ರೀಡಾಂಗಣಗಳನ್ನು ನಿರ್ಮಿಸಲು ಅನುದಾನವನ್ನು ಒದಗಿಸಿದ್ದು, ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಈಗಾಗಲೇ ದಿನಾಂಕ: 07-10-2025 ರಂದು ಕಂಬಳ ಕ್ರೀಡೆಗೆ ಸಂಬಂಧಿಸಿದಂತೆ **'ರಾಜ್ಯ ಕ್ರೀಡಾ ಸಂಸ್ಥೆ'**ಯನ್ನು ಗುರುತಿಸಿ, ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಮಾನ್ಯತೆ ನೀಡಲಾಗಿದ್ದು, ಈ ಕ್ರಮವು ಶಿಸ್ತುಬದ್ಧವಾಗಿ ಕಂಬಳಗಳ ಆಯೋಜನೆಗೆ ಸಹಕಾರಿಯಾಗಲಿದೆ. |
| ಉ | ಪ್ರತಿ ವರ್ಷ ಕಂಬಳ ಕ್ರೀಡೆಗೆ ನೀಡುವ ಅನುದಾನವನ್ನು ವಾರ್ಷಿಕ ಇಲಾಖಾ ಕ್ರಿಯಾ ಯೋಜನೆಯಲ್ಲಿ ಸೇರಿಸಲು ಕೈಗೊಂಡ ಕ್ರಮಗಳೇನು; ಈ ಕುರಿತಂತೆ ನಿಯಮಗಳನ್ನು ಅಂತಿಮಗೊಳಿಸಿ ಯಾವಾಗ ಅನುಷ್ಠಾನಗೊಳಿಸಲಾಗುವುದು? | ಸನ್ಮಾನ್ಯ ಮುಖ್ಯಮಂತ್ರಿಗಳು 2025-26ನೇ ಸಾಲಿನ ಆಯವ್ಯಯ ಕಂಡಿಕೆ-397ರಲ್ಲಿ "ಗ್ರಾಮೀಣ ಕ್ರೀಡೆಗಳಾದ ಕಂಬಳ, ಎತ್ತಿನಬಂಡಿ ಓಟ ಮತ್ತು ಮಲ್ಲಕಂಬ ಕ್ರೀಡೆಗಳಿಗೆ ಉತ್ತೇಜನ ನೀಡಲಾಗುವುದು" ಎಂದು ಘೋಷಿಸಿದ್ದು, ಈ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ವೈಎಸ್‌ಡಿ 163 ಸಿಡಿಎನ್ 2025 (ಭಾ-1),ದಿನಾಂಕ: 03-06-2025 ರಲ್ಲಿ ಅನುಮೋದನೆ ನೀಡಲಾಗಿದೆ.<br><br>ಕಂಬಳ ಕ್ರೀಡೆಗೆ ಸಂಬಂಧಿಸಿದಂತೆ ಕರ್ನಾಟಕ ಕ್ರೀಡಾ ಪ್ರಾಧಿಕಾರದ ವಿಶೇಷ ಅನುದಾನ ಸಂಹಿತೆ ನಿಯಮಗಳನ್ನು ರೂಪಿಸಲು ಕ್ರಮವಹಿಸಲಾಗುತ್ತಿದೆ. |

**ವೈಎಸ್ ಡಿ-ಇಬಿಬಿ/165/2025**

ಸಿದ್ದರಾಮಯ್ಯ

**(ಸಿದ್ದರಾಮಯ್ಯ)**
ಮುಖ್ಯಮಂತ್ರಿ